(ಸಾಕ್ಷಿಯನ್ನು ಇಂದು ದಿನಾಂಕ 04.03.2026 ರಂದು ಕರೆಸಿ ಪ್ರಮಾಣ
ವಚನ ಬೋಧಿಸಲಾಗಿದೆ)

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :</u>**

ನಾನೇ ಚಂದ್ರಕಾಂತ ರೆಡ್ಡಿ ಎಂದು ತೋರಿಸುವ ದಾಖಲೆ ಹಾಜರುಪಡಿಸಿಲ್ಲ ಅನ್ನುವುದು ನಿಜ. ನಾನು ವಾದಿ ಕಂಪನಿಯ ವ್ಯವಸ್ಥಾಪಕ ಎಂದು ತೋರಿಸುವ ದಾಖಲೆ ಹಾಜರುಪಡಿಸಿಲ್ಲ ಅನ್ನುವುದು ಸುಳ್ಳು. ನಾನು ವಾದಿ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ಅನ್ನುವುದು ಸುಳ್ಳು. ವಾದಿ ಕಂಪನಿಯು ನೋಂದಾಯಿತು ಕಂಪನಿ ಎಂದು ತೋರಿಸುವ ದಾಖಲೆ ಹಾಜರುಪಡಿಸಿಲ್ಲ ಅನ್ನುವುದು ಸುಳ್ಳು. ನನಗೆ ಮುಕ್ತಿಯಾರ್ ಪತ್ರವನ್ನು ದಿನಾಂಕ 17.10.2025 ರಂದು ಕೊಟ್ಟಿದ್ದರಿಂದ ಅದರ ಪೂರ್ವದಲ್ಲಿನ ದಾವೆಯ ಪ್ರತಿಯೊಂದು ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಅನ್ನುವುದು ಸುಳ್ಳು. ಈ ಬಗ್ಗೆ ನಾನು ನನ್ನ ಶಪಥ ಪತ್ರದಲ್ಲಿ ದಾಖಲಿಸಿದ್ದೇನೆ. ದಾವೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವ ಕುರಿತು ಶಪಥ ಪತ್ರದಲ್ಲಿ ಬರೆದಿದ್ದೇನೆ ಎಂಬುದು ಸುಳ್ಳು ಇದೆ ಅನ್ನುವುದು ಸುಳ್ಳು.

2. ನನಗೆ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ಸದರಿ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನಾನು ಸಕ್ಷಮ ವ್ಯಕ್ತಿಯಲ್ಲ ಅನ್ನುವುದು ಸುಳ್ಳು. ತಮಿಳುನಾಡಿನಲ್ಲಿ ನಮ್ಮ ಶಾಖೆ ಇರುವುದಿಲ್ಲ. ನಾವು ಇಲ್ಲಿಂದಲೇ ಭಾರತದ ತುಂಬೆಲ್ಲ ವ್ಯವಹಾರ ಮಾಡುತ್ತೇವೆ. ತಮಿಳುನಾಡಿನ ಚೆನ್ನೈ ನಗರದ ಕೋಯಂಪೇಟದಲ್ಲಿ ನಮ್ಮ ಕಾರ್ಯಾಲಯ ಮಾತ್ರ ಇರುತ್ತದೆ ಆದರೆ ಶಾಖೆ ಇರುವುದಿಲ್ಲ. ಕೋಯಂಪೇಟದಲ್ಲಿ ಇರುವ ಕಾರ್ಯಲಾಯದ ಮುಖಾಂತರ ನಾವು ತಮಿಳುನಾಡು ತುಂಬೆಲ್ಲಾ ವ್ಯಾಪಾರ ಮಾಡುತ್ತಿದ್ದೇವೆ ಅನ್ನುವುದು ಸುಳ್ಳು. ಕೋಯಂಪೇಟ ಕಾರ್ಯಲಾಯವು ಸದರಿ ಪ್ರಕರಣದಲ್ಲಿ ಅವಶ್ಯಕ ಪಕ್ಷಗಾರ ಅನ್ನುವುದು ಸುಳ್ಳು. ಇವರನ್ನು ಪಕ್ಷಗಾರರನ್ನಾಗಿ ಮಾಡದೇ ಇದ್ದಿದ್ದಕ್ಕೆ ನಮ್ಮ ದಾವೆ ಉರ್ಜಿತ ಅಲ್ಲ ಅನ್ನುವುದು ಸುಳ್ಳು.

3. ನಾವು, ನಮ್ಮ ಭತ್ತದ ಮೂಟೆಗಳನ್ನು ಕೋಯಂಪೇಟ ಕಾರ್ಯಾಲಯಕ್ಕೆ ಮಾತ್ರ ರವಾಣೆ ಮಾಡುತ್ತೇವೆ ಅನ್ನುವುದು ಸುಳ್ಳು. ನಿ.ಪಿ 1 ರ ಮೇಲೆ ಪ್ರತಿವಾದಿಯ ಸಹಿ ಇಲ್ಲ ಅನ್ನುವುದು ನಿಜ. ನಿ.ಪಿ 1 ರ ಮೇಲೆ ಪ್ರತಿವಾದಿಯ ಸಹಿ ಇಲ್ಲವಾದ್ದರಿಂದ ದಾವೆಯ ಸರಕುಗಳು ಪ್ರತಿವಾದಿಯರಿಗೆ ತಲುಪಿಲ್ಲ ಅನ್ನುವುದು ಸುಳ್ಳು. ದಾವೆಯ ಸರಕುಗಳು ಪ್ರತಿವಾದಿಗೆ ತಲುಪಿರುವ ಕುರಿತು ಸಾಕ್ಷದಾರ ಹಾಜರುಪಡಿಸಿಲ್ಲ ಅನ್ನುವುದು ಸುಳ್ಳು. ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ಭಾಗಶಃ ಪಾವತಿ ಮಾಡಿದ್ದಾಗಿ ಹೇಳುತ್ತಾರೆ.

4. ದಾವಾ ವ್ಯವಹಾರದ ಕುರಿತು ವಾದಿ ಮತ್ತು ಪ್ರತಿವಾದಿಯರ ಮಧ್ಯ ಲಿಖಿತ ಒಡಂಬಡಿಕೆಯಾಗಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮಧ್ಯ ದಾವಾ ವ್ಯವಹಾರದ ಕುರಿತು ಲಿಖಿತ ಒಡಂಬಡಿಕೆಯಾಗಿಲ್ಲವಾದ್ದರಿಂದ ದಾವಾ ಹಣ ಪಾವತಿಗೆ ಪ್ರತಿವಾದಿಯರು ಜವಾಬ್ದರ ಅಲ್ಲ ಅನ್ನುವುದು ಸುಳ್ಳು.

5. ಪ್ರತಿವಾದಿಯು G.S.T ಬಿಲ್ಲನ್ನು ಕೋಯಂಪೇಟ ಕಾರ್ಯಾಲಯಕ್ಕೆ ಕೊಟ್ಟಿದ್ದನ್ನು ನಾವು ಅದನ್ನು ತರಿಸಿಕೊಂಡು ಪ್ರತಿವಾದಿ ಹೆಸರಿಗೆ ಬಿಲ್ಲನ್ನು ತಯಾರಿಸಿದ್ದೇವೆ ಅನ್ನುವುದು ಸುಳ್ಳು. ದಾವಾ ಸರಕುಗಳನ್ನು ಪ್ರತಿವಾದಿಯರಿಗೆ ಪೂರೈಕೆ ಮಾಡಿದ್ದರ ಬಗ್ಗೆ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪ್ರಕರಣದಲ್ಲಿ ಹಾಜರುಪಡಿಸಿದ್ದು, ನಮ್ಮ ಹತ್ತಿರ ಇನ್ನು ಬೇರೆ ದಾಖಲೆಗಳು ಇರುವುದಿಲ್ಲ. ಪ್ರತಿವಾದಿಯ ಲಿಖಿತ ತಕರಾರನ್ನು ನಾನು ಓದಿಲ್ಲ. ವಾದ ಪತ್ರದಲ್ಲಿ ತೋರಿಸಲಾದ ಪ್ರತಿವಾದಿಯ ವಿಳಾಸವು ಕೇವಲ ಕಾಲ್ಪನಿಕವಾಗಿದ್ದು ವಾಸ್ತವದಲ್ಲಿ ಅದು ಅಸ್ತಿತ್ವದಲ್ಲಿ ಇಲ್ಲ ಅನ್ನುವುದು ಸುಳ್ಳು. ಪ್ರತಿವಾದಿಯ ವಿಳಾಸವು ಕಾಲ್ಪನಿಕವಾಗಿದ್ದರಿಂದ ಅಲ್ಲಿ ಅಕ್ಕಿ ಮೂಟೆಗಳು ಪೂರೈಸಲು ಅವಕಾಶ ಇರುವುದಿಲ್ಲ ಅನ್ನುವುದು ಸುಳ್ಳು.

6. ಪ್ರತಿವಾದಿಯ ವಿಳಾಸವು ವಾಸ್ತವಿಕವಾಗಿ ಅಸ್ತಿತ್ವದಲ್ಲಿ ಇರುವುದಕ್ಕೆ ಸಾಕ್ಷಿ ಎಂದರೆ ಅವರು ಮಾಡಿದ ಭಾಗಶಃ ಪಾವತಿಯಾಗಿರುತ್ತದೆ ಅದರ ಬಗ್ಗೆ ದಾಖಲೆ

ಹಾಜರುಪಡಿಸಿದ್ದೇನೆ. ದಾವಾ ವ್ಯವಹಾರದಲ್ಲಿ ಪೂರೈಸಲಾಗಿದೆ ಎಂದು ಹೇಳಲಾದ ಅಕ್ಕಿ ಸರಕು ಕಳಪೆ ಗುಣಮಟ್ಟದಾಗಿತ್ತು ಅನ್ನುವುದು ಸುಳ್ಳು.

7. ದಾವಾ ವ್ಯವಾಹರವು ವಾದಿ ಮತ್ತು ಪ್ರತಿವಾದಿಯರ ಮಧ್ಯ ಚೆನ್ನೈ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದಿದ್ದರಿಂದ ಈ ನ್ಯಾಯಾಲಯಕ್ಕೆ ವಿಚಾರಣಾ ಅಧಿಕಾರ ಇಲ್ಲ ಅನ್ನುವುದು ಸುಳ್ಳು. ದಾವೆಯಲ್ಲಿ ನಾವು ಶೇಕಡಾ 14 ರ ಬಡ್ಡಿ ಆಕರಣೆ ಕಾನೂನುಬಾಹಿರವಾಗಿದೆ ಅನ್ನುವುದು ಸುಳ್ಳು. ಪ್ರತಿವಾದಿಯ ಜೊತೆ ವೈಯಕ್ತಿಕ ಸಂಪರ್ಕವನ್ನು ಯಾವ ದಿವಸ, ಯಾವ ತಿಂಗಳು ಮತ್ತು ಯಾವ ದೂರವಾಣಿ ಸಂಖ್ಯೆಗೆ ಮಾಡಲಾಯಿತು ಎಂಬುದರ ಬಗ್ಗೆ ವಿವರಗಳು ತಿಳಿಸಿಲ್ಲ ಅನ್ನುವುದು ನಿಜ. ಪ್ರತಿವಾದಿಯ ಜೊತೆ ಸಂಪರ್ಕ ಮಾಡಿಲ್ಲವಾದ್ದರಿಂದ ಸದರಿ ವಿವರಗಳನ್ನು ಬಹಿರಂಗಪಡಿಸಿಲ್ಲ ಅನ್ನುವುದು ಸುಳ್ಳು. ಸದರಿ ದಾವೆಯನ್ನು ಸರಿಯಾದ ರೀತಿಯಲ್ಲಿ ಮೌಲ್ಯಮಾಪನ ಮಾಡಿಲ್ಲ ಮತ್ತು ಸರಿಯಾದ ರೀತಿಯಲ್ಲ ನ್ಯಾಯಾಲಯದ ಶುಲ್ಕ ಪಾವತಿ ಮಾಡಿಲ್ಲ ಮತ್ತು ದಾವೆಯು ಕಾಲಮೀತಿಯಲ್ಲಿ ಇಲ್ಲವಾದ್ದರಿಂದ ದಾವೆಯಲ್ಲಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಬಗೆಯ ಹಣ ಪಾವತಿಗೆ ಪ್ರತಿವಾದಿಯು ಹೊಣೆಗಾರ ಅಲ್ಲ ಅನ್ನುವುದು ಸುಳ್ಳು.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.